

ತಮ್ಮ ಸಿನಿಮಾ ನಾಯಕಿಯರೊಂದಿಗೆ ಗಿರೀಶ ಕಾಸರವಳ್ಳಿ

ಪ್ರಾದೇಶಿಕತೆ ಹಾಗೂ ಜಾಗತೀಕರಣ ಸಂದರ್ಭದ ಸಮಕಾಲೀನ ಜಗತ್ತಿನೊಂದಿಗೆ ಏಕಕಾಲದಲ್ಲಿ ಅನುಸಂಧಾನ ನಡೆಸುತ್ತದೆ. ಆ ಕಾರಣದಿಂದಲೇ, ಗುಲಾಬಿ ಮತ್ತು ಈರ್‍ಯ ಕನ್ನಡನಾಡಿನ ಯಾವುದೋ ಮೂಲೆಯಲ್ಲಿ ಅನಾಮಧೇಯರಾಗಿ ಬದುಕುವವರಾದರೂ, ಅವರ ಬದುಕಿನ ಮೇಲೆ ಆಧುನಿಕ ಸಂದರ್ಭದ ಪಲ್ಲಟಗಳ ಪರಿಣಾಮ ಸ್ಪಷ್ಟವಾಗಿದೆ. ಈ ವೈರುಧ್ಯವನ್ನು ಕಾಸರವಳ್ಳಿ ಅನನ್ಯವಾಗಿ ಕಟ್ಟಿಕೊಡುತ್ತಾರೆ. ಕನ್ನಡ ಚಿತ್ರವೊಂದು ತನ್ನ ಅಸ್ಮಿತೆಯನ್ನು ಉಳಿಸಿಕೊಂಡೇ ಭಾರತೀಯ ಸಂಸ್ಕೃತಿಯೊಂದಿಗೆ ಹಾಗೂ ಜಾಗತಿಕ ಸಂಸ್ಕೃತಿಗಳೊಡನೆ ಅನುಸಂಧಾನ ನಡೆಸಬೇಕಾದ ತುರ್ತು, ಸವಾಲನ್ನು ಕಾಸರವಳ್ಳಿಯವರ ಚಿತ್ರಗಳು ಪರಿಣಾಮಕಾರಿಯಾಗಿ ನಿಭಾಯಿಸಿವೆ.

ಗಿರೀಶ ಕಾಸರವಳ್ಳಿ ಕನ್ನಡದ ಪರ್ಯಾಯ ಸಿನಿಮಾಗಳ ಪ್ರಮುಖ ನಿರ್ದೇಶಕ ಎನ್ನುವುದು ನಿಸ್ಸಂಶಯ. ಹೀಗೆ ಹೇಳುವ ಸಂದರ್ಭದಲ್ಲೇ, ಪರ್ಯಾಯ ಸಿನಿಮಾ ಎನ್ನುವ ಪರಿಕಲ್ಪನೆಯೇ ಇಲ್ಲದ ಸಂದರ್ಭದಲ್ಲಿ ಭಿನ್ನ ಸಿನಿಮಾಗಳನ್ನು ರೂಪಿಸಿದ ಎನ್. ಲಕ್ಷ್ಮೀನಾರಾಯಣ್ ಅವರಂಥ ನಿರ್ದೇಶಕರನ್ನು ನೆನಪಿಸಿಕೊಳ್ಳಬೇಕು. 'ನಾಂದಿ', 'ಮುಕ್ತಿ', 'ಉಯ್ಯಾಲೆ' ಹಾಗೂ 'ಬೆಟ್ಟದ ಹೂವು' ಸಿನಿಮಾಗಳು ಎನ್ಲೆಲ್ ಅವರ ಭಿನ್ನ ಧಾಟಿ–ದಾರಿಯ ಹಂಬಲದ ಪ್ರಯೋಗಗಳಂತಿವೆ.

ಸಾಮಾಜಿಕ ಆಶಯಗಳ ಹುಡುಕಾಟದ ರೂಪದಲ್ಲಿ ನಿರಂತರವಾಗಿ ಸಿನಿಮಾಗಳನ್ನು ರೂಪಿಸಿಕೊಂಡು ಬಂದಿರುವ ಬರಗೂರು ರಾಮಚಂದ್ರಪ್ಪ ಅವರು ಪ್ರಯೋಗಶೀಲ ಚಿತ್ರಗಳ ಮತ್ತೊಬ್ಬ ಪ್ರಮುಖ ನಿರ್ದೇಶಕರು. 'ಒಂದು ಊರಿನ ಕಥೆ', 'ಬೆಂಕಿ', 'ಸೂರ್ಯ', 'ಕೋಟೆ', 'ಕರಡೀಪುರ', 'ಹಗಲುವೇಷ', 'ಕ್ಷಾಮ', 'ಶಾಂತಿ', 'ತಾಯಿ', 'ಶಬರಿ', 'ಅಮೃತಮತಿ' ಹಾಗೂ 'ತಾಯಿ ಕಸ್ತೂರ್ ಗಾಂಧಿ' ಸೇರಿದಂತೆ ಬರಗೂರರ ಎಲ್ಲ ಸಿನಿಮಾಗಳು ಸಾಮಾಜಿಕ ನ್ಯಾಯ, ಸ್ವಾತಂತ್ರ್ಯ–ಸಮಾನತೆಯ ಹಂಬಲದ ಪ್ರಯತ್ನಗಳಾಗಿವೆ. ಕಥೆಗೆ ತಕ್ಕಂತೆ ವಿಶಿಷ್ಟವಾದ ನಿರೂಪಣಾ ಶೈಲಿಯನ್ನು ಬಳಸಿಕೊಳ್ಳುವ ಬರಗೂರರು, ತಮ್ಮದೇ ಆದ ತಾತ್ವಿಕತೆಯನ್ನು ರೂಪಿಸಿಕೊಂಡಿರುವ ವಿರಳ ನಿರ್ದೇಶಕರ ಸಾಲಿಗೆ ಸೇರಿದವರು. ■



**ರಾಜಕುಮಾರ್** ನಂತರ ಸ್ಥಗಿತಗೊಂಡಂತಿದ್ದ ಕನ್ನಡ ಚಿತ್ರರಂಗದಲ್ಲಿ ಹೊಸ ಚಲನೆಯನ್ನು ಹುಟ್ಟುಹಾಕಿದ ಕೀರ್ತಿ ಯೋಗರಾಜ ಭಟ್‌ರ 'ಮುಂಗಾರು ಮಳೆ' (2006) ಹಾಗೂ ಸೂರಿ ಅವರ 'ದುನಿಯಾ' (2007) ಸಿನಿಮಾಗಳಿಗೆ ಸಲ್ಲಬೇಕು.

'ಮುಂಗಾರು ಮಳೆ' ಹಾಗೂ 'ದುನಿಯಾ' ಕನ್ನಡ ಚಿತ್ರರಂಗದ ಮೇಲೆ ಬೀರಿದ ಪರಿಣಾಮಗಳನ್ನು ಹೀಗೆ ಗುರ್ತಿಸಬಹುದು:

'ಮುಂಗಾರು ಮಳೆ' ಮತ್ತು 'ದುನಿಯಾ' ಚಿತ್ರಗಳು ಹೊಸ ತಂತ್ರಜ್ಞರು ಮತ್ತು ಕಲಾವಿದರನ್ನು ಚಿತ್ರರಂಗಕ್ಕೆ ಪರಿಚಯಿಸಿದವು. 'ಮುಂಗಾರು ಮಳೆ' ಚಿತ್ರದ ಮೂಲಕ ನಿರ್ದೇಶಕ ಯೋಗರಾಜ ಭಟ್ ಅವರೆಗಿನ ಸೋಲುಗಳಿಂದ ಹೊರಬಂದು ತಾರಾಪಟ್ಟ ಪಡೆದರೆ, 'ದುನಿಯಾ' ಮೂಲಕ ಸೂರಿ ಚಿತ್ರರಂಗದಲ್ಲಿ ತಮ್ಮ ಅಸ್ತಿತ್ವ ಕಂಡುಕೊಂಡರು.

ಕನ್ನಡ ಚಿತ್ರಗಳ ಮಾರುಕಟ್ಟೆಯ ವ್ಯಾಪ್ತಿ ಎಷ್ಟು ದೊಡ್ಡದು ಎನ್ನುವುದು ಈ ಚಿತ್ರಗಳಿಂದ ಸ್ಪಷ್ಟವಾಯಿತು ಹಾಗೂ ಮಾರುಕಟ್ಟೆ ವಿಸ್ತಾರಗೊಂಡಿತು. ಚಿತ್ರಮಂದಿರಗಳಿಂದ ದೂರವಾಗುತ್ತಿದ್ದ ಕನ್ನಡ ಪ್ರೇಕ್ಷಕರನ್ನು ಮರಳಿ ಸಿನಿಮಾಗಳಿಗೆ ಕರೆತಂದ ಈ ಚಿತ್ರಗಳು, ಇತರ ಭಾಷೆಗಳ ಪ್ರೇಕ್ಷಕರನ್ನೂ ಕನ್ನಡ ಚಿತ್ರಗಳಿಗೆ ಪರಿಚಯಿಸಿದ್ದು ವಿಶೇಷ.

'ಮುಂಗಾರು ಮಳೆ' ಮತ್ತು 'ದುನಿಯಾ' ಚಿತ್ರಗಳ ನಾಯಕರಾದ ಗಣೇಶ್ ಹಾಗೂ ವಿಜಯ್, ನಾಯಕಿಯರಾದ ಪೂಜಾ ಗಾಂಧಿ ಮತ್ತು ರಶ್ಮಿ ಸ್ಫುರದ್ರೂಪಿಗಳಲ್ಲದ ಹಾಗೂ ಸಾಮಾನ್ಯ ಹಿನ್ನೆಲೆಯ ಕಲಾವಿದರು. ಈ ಹಿನ್ನೆಲೆಯೇ ಅನೇಕ ಹುಡುಗ ಹುಡುಗಿಯರಿಗೆ ಕಲಾವಿದರಾಗಲು ಪ್ರೇರಣೆ ಒದಗಿಸಿತು.

ಮನೋಮೂರ್ತಿ ಅವರ ಸಂಗೀತಕ್ಕೆ ಜಯಂತ ಕಾಯ್ಕಿಣಿ ಅವರು ಬರೆದ 'ಅನಿಸುತಿದೆ ಯಾಕೋ ಇಂದು...' ಗೀತೆ ಅತ್ಯಂತ ಜನಪ್ರಿಯವಾಯಿತು. ಜಯಂತ ಕಾಯ್ಕಿಣಿ ಸಿನಿಮಾ ಕವಿಯಾಗಿಯೂ 'ಮುಂಗಾರು ಮಳೆ' ಮೂಲಕ ಜನಪ್ರಿಯರಾದರು. ಇದೇ ಕಾಲಕ್ಕೆ ಕವಿರಾಜ್, ಹೃದಯಶಿವ, ಡಾ. ನಾಗೇಂದ್ರ ಪ್ರಸಾದ್ ಮುಂತಾದ ಯುವ ಗೀತರಚನೆಕಾರರು ಹೆಚ್ಚು ಹುರುಪಿನಿಂದ ಗೀತೆಗಳನ್ನು ರಚಿಸತೊಡಗಿದರು.

ಹೊಸ ಪ್ರತಿಭಾವಂತ ಛಾಯಾಗ್ರಾಹಕರಿಗೂ ಬೇಡಿಕೆ ಕುದುರಿತು. 'ಮುಂಗಾರು ಮಳೆ'ಯ ಸಂಗೀತ ನಿರ್ದೇಶಕ ಮನೋಮೂರ್ತಿ, ಛಾಯಾಗ್ರಾಹಕ ಕೃಷ್ಣ, ಗೀತರಚನೆಕಾರ ಜಯಂತ ಕಾಯ್ಕಿಣಿ ತಾರಾ ವರ್ಚಸ್ಸು ಪಡೆದರು. 'ದುನಿಯಾ' ಚಿತ್ರಕ್ಕೆ ಸಂಗೀತ ನೀಡಿದ ವಿ. ಮನೋಹರ್ ಹಾಗೂ ಛಾಯಾಗ್ರಾಹಕ ಸತ್ಯ ಹೆಗಡೆ ಅವರ ಬೇಡಿಕೆ ಕೂಡ ಹೆಚ್ಚಾಯಿತು. ಈ ವೈಯಕ್ತಿಕ ಸಾಧನೆಯ ಜೊತೆಗೆ, ಸಂಗೀತ, ಸಾಹಿತ್ಯ ಹಾಗೂ ಛಾಯಾಗ್ರಹಣಕ್ಕೆ ಒತ್ತು ನೀಡುವ ಪರಿಪಾಟ ಕನ್ನಡ ಚಿತ್ರರಂಗದಲ್ಲಿ ಹೆಚ್ಚಾಯಿತು.

ಈ ಎರಡು ಚಿತ್ರಗಳ ಕಥೆಯಿಂದ ಪ್ರಭಾವಿತವಾದ ಹಲವು ಚಿತ್ರಗಳು ಮುಂದಿನ ದಿನಗಳಲ್ಲಿ ಸಾಲುಸಾಲಾಗಿ ಬಂದವು. ಪ್ರೇಮ ಇಲ್ಲವೇ ರೌಡಿಸಂ ಕಥೆಗಳು ಸಿದ್ಧಸೂತ್ರಗಳಾಗಿ ಸಿನಿಮಾ ಮಂದಿಗೆ ಒದಗತೊಡಗಿದವು.

ಕನ್ನಡ ಚಿತ್ರರಂಗದಲ್ಲಿ ಹೊಸ ನಿರ್ಮಾಪಕರು ಕಾಣಿಸಿಕೊಳ್ಳುವುದರ ಜೊತೆಗೆ ತೆರೆಯ ಮೇಲೆ ಸಿನಿಮಾದ ಯಾವುದೇ ಹಿನ್ನೆಲೆ, ಸಿದ್ಧತೆ ಇಲ್ಲದ ಹುಡುಗ ಹುಡುಗಿಯರ ಮುಖಗಳೂ ಕಾಣಿಸಿಕೊಳ್ಳತೊಡಗಿದವು. ಬಂಡವಾಳ ಹೂಡುವ ಉದ್ಯಮಿಗಳ ಮಕ್ಕಳು, ಸೋದರರು ನಾಯಕರಾಗಿ ಬಣ್ಣ ಹಚ್ಚತೊಡಗಿದರು.

'ಮುಂಗಾರು ಮಳೆ', 'ದುನಿಯಾ' ಚಿತ್ರಗಳು ಕನ್ನಡ ಚಿತ್ರರಂಗದಲ್ಲಿ ಹೊಸ ಚಲನೆ ಮೂಡಿಸಿದಂತೆಯೇ, ನಂತರದ ವರ್ಷಗಳಲ್ಲಿ ಹಲವು ಸಮಸ್ಯೆಗಳನ್ನೂ ಉಂಟುಮಾಡಿದವು. ಸಂಖ್ಯೆಯಲ್ಲಿ ಏರಿಕೆ, ಗುಣಮಟ್ಟದಲ್ಲಿ ಕೊರತೆ ಎನ್ನುವ ಸ್ಥಿತಿ ತಲೆದೋರಿತು. ನಕಾರಾತ್ಮಕ ಸಂಗತಿಗಳ ನಡುವೆಯೂ, ಚಿತ್ರೋದ್ಯಮದಲ್ಲಿ ಹೊಸ ಬದಲಾವಣೆ ತಂದುದು ಈ ಸಿನಿಮಾಗಳ ಅಗ್ಗಳಿಕೆ. ■